ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

3. ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ 2011 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತರಿಗಳ ಪರವಾಗಿ) : ಮನ್ಯ ಅಧ್ಯಕ್ಷರೆ: 2011–12ರ ಆಯವ್ಯಯ ಭಾಷಣದಲ್ಲಿ ಆಯವ್ಯಯದ ಸಂದರ್ಭದಲ್ಲಿ ಒಂದಷ್ಟು ಪ್ರಸ್ತಾವನೆಗಳನ್ನು ನಾವು ಮಾಡಿದ್ದೆವು. ವಿಶೇಷವಾಗಿ ವ್ಯವಸಾಯ ಕ್ಷೇತ್ರ, ಕೃಷಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಬಯೋ ಟೆಕ್ನಾಲಜಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಈ ಕ್ಷೇತ್ರಗಳಲ್ಲಿ to give impetus, ಒಂದು ಉತ್ತೇಜನ ಕೊಡುವುದಕ್ಕೋಸ್ಕರ ಒಂದಷ್ಟು concession ಕೊಡಬೇಕೆಂದು proposal ಕಳುಹಿಸಿದರು. ಆ proposal ಅನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರುವುದಕ್ಕೋಸ್ಕರ ಸ್ಟ್ಯಾಂಪ್ ಆಕ್ಟ್‌ಗೆ ನಾವು ಅಮೆಂಡ್ ಮೆಂಟ್ ತರುತ್ತಿದ್ದೇವೆ. ದಯವಿಟ್ಟು ಪಾಸ್ ಮಾಡಿ ಕೊಡಬೇಕು.

SRI SIDDARAMAIAH : What are those concessions you are giving? To whom you are giving?

ಶ್ರೀ ಎಸ್. ಸುರೇಶ್ ಕುಮಾರ್ : ನಮ್ಮಲ್ಲಿ ನಾಲ್ಕು ಪಾಲಿಸಿಗಳನ್ನು ಮಾಡುತ್ತೇವೆ. The Integrated Karnataka Agri-Business Development Policy, 2011. This is subsequent to that budget proposal.

ಶ್ರೀ ಸಿದ್ದರಾಮಯ್ಯ : ನಾನು ನಿಮ್ಮ ಮಾತನ್ನು ಒಪ್ಪಿಕೊಳ್ಳುತ್ತೇನೆ. My point is what are the concessions you are giving, to whom you are giving? ಅವುಗಳನ್ನು ಮೆನ್‌ಷನ್ ಮಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಆ ಕ್ಷೇತ್ರದಲ್ಲಿ ಅಂದರೆ Agri-Business ಮಾಡುವವರಿಗೆ. . .

ಶ್ರೀ ಸಿದ್ದರಾಮಯ್ಯ : ಅವರಿಗೇನು ಕೊಡುತ್ತೀರಿ?

ಶ್ರೀ ಸುರೇಶ್ ಕುಮಾರ್ : ಅವರಿಗೆ ಭೂಮಿ ಕೊಂಡುಕೊಳ್ಳುವಾಗ

ಸ್ಟ್ಯಾಂಪ್ ಆಕ್ಟ್‌ನಲ್ಲಿ exemption ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ರೂಲ್ಸ್‌ನಲ್ಲಿ ಮಾಡಿಕೊಳ್ಳುತ್ತೀರೋ ಹೇಗೆ?

ಶ್ರೀ ಸುರೇಶ್ ಕುಮಾರ್ : ರೂಲ್ಸ್‌ನಲ್ಲಿ ಮಾಡಿಕೊಳ್ಳುತ್ತೇವೆ ಆ ಪ್ರಪೋಸಲ್‌ಗೆ Stamp Act ನಲ್ಲಿ ಒಂದು ರೂಪ ಕೊಡುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ ಎನ್ನುವ ಕಾರಣಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದೀರಿ. ಒಂದು ಸಾರಿ Stamp Act ನಲ್ಲಿ exemption ಕೊಟ್ಟು register ಆದ ಮೇಲೆ ಅಲ್ಲಿ ನಿಮ್ಮ ಕಂಟ್ರೋಲ್ ಏನೂ ಇರುವುದಿಲ್ಲ. ಕಂಟ್ರೋಲ್ ಇದ್ದರೂ ಕೂಡ ಏನು ಮಾಡುತ್ತಾರೆಂದು ನೀವು ಯಾರೂ ಅದನ್ನು ಯೋಚನೆ ಮಾಡುವುದಿಲ್ಲ. ದಯಮಾಡಿ ಈ ಎಲ್ಲಾ ಪಾಲಿಸಿ ಅಡಿಯಲ್ಲಿಯೂ ಕೂಡ ಯಾರ್ಯಾರು ಬೆನಿಫಿಟ್ ತೆಗೆದುಕೊಳ್ಳುತ್ತಾರೆ, ಅವರು ಪ್ರಾಜೆಕ್ಟ್‌ಗಳನ್ನು, ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನೂ ಕೂಡ ಮಾನಿಟರ್ ಮಾಡಬೆಕು, ಪರಾಮರ್ಶೆ ಮಾಡಬೇಕು. ಅದನ್ನು ಮಾಡದೇ ಇದ್ದ ಸಂದರ್ಭದಲ್ಲಿ ವಾಪಸ್ ತೆಗೆದುಕೊಳ್ಳುವ ಕೆಲಸವನ್ನು ಮಾಡದೇ ಇದ್ದರೆ ನೀವು ರಿಯಲ್ ಎಸ್ಟೇಟ್ ಮಡುವವರಿಗೆ ಕೈ ಜೋಡಿಸಿದ ಹಾಗಾಗುತ್ತದೆ. ಇವತ್ತೇನು ನೀವು ಲ್ಯಾಂಡ್ ಬ್ಯಾಂಕ್ ಎಂದು ಮಾಡಿದ್ದೀರಿ, ಆ ಲ್ಯಾಂಡ್ ಬ್ಯಾಂಕ್‌ದು ಎಲ್ಲವೂ ಕೂಡ ಇದೇ ರೀತಿಯಾಗಿ ದುರುಪಯೋಗ ಆಗುವುದಕ್ಕೆ ಅವಕಾಶವಾಗುತ್ತದೆ. In the name of industry, they will take the land and they divert it and they are not at all using it also. ದಯಮಾಡಿ ಇದಕ್ಕೆ ಅವಕಾಶ ಕೊಡದೆ ಇರುವ ರೀತಿಯಲ್ಲಿ ಕಡಿವಾಣ ಹಾಕತಕ್ಕಂತಹ ರೀತಿಯಲ್ಲಿ ಆಗಬೇಕು. ನೀವು Stamp Act ಗೆ exemption ಕೊಟ್ಟಂತಹ ಸಂದರ್ಭದಲ್ಲಿ ಒಂದು ಸಾರಿ ವರ್ಗಾವಣೆ

ಆದ ಮೇಲೆ, ಒಂದು ಸಾರಿ ರಿಜಿಸ್ಟರ್ ಆದ ಮೇಲೆ ನಮ್ಮ ಜವಾಬ್ದಾರಿ ತಪ್ಪಿತು ಎಂದು ಮಾಡತಕ್ಕಂಥದ್ದು ತಪ್ಪು. ಅದರ ಮೇಲೆ ಕಂಟ್ರೋಲ್ ಇಡಬೇಕು. ಅದಕ್ಕೆ ಏನಾದರೂ ಒಂದು ನಿಯಂತ್ರಣ ಬರತಕ್ಕಂತಹ ರೀತಿಯಲ್ಲಿ, ಎಲ್ಲಾ ಇಲಾಖೆಗಳಿಗೂ apply ಆಗತಕ್ಕಂತಹ ರೀತಿಯಲ್ಲಿ, ಯಾರ್ಯಾರು ಈ ರೀತಿಯಾಗಿ concession ತೆಗೆದುಕೊಂಡಿರುತ್ತಾರೆ ಅವರು ಕಾಲಬದ್ಧವಾಗಿ including KIADB ಅವರು ಮಾಡಲಿಲ್ಲವೆಂದರೆ, ಅದನ್ನು resume ಮಾಡತಕ್ಕಂತಹ ರೀತಿಯಲ್ಲಿ ಪ್ರಕ್ರಿಯೆಗಳು ಪ್ರಾರಂಭವಾಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಏನು ಮಾನ್ಯ ಉಪ ನಾಯಕರು ಹೇಳಿದ್ದಾರೆ ಅದು ನೂರಕ್ಕೆ ನೂರರಷ್ಟು ಸತ್ಯ. ನಾಲ್ಕು ಕ್ಷೇತ್ರಗಳಲ್ಲಿ ಅದಕ್ಕೆ ಮಾತ್ರ ಸೀಮಿತ ಅಲ್ಲ. ಯಾರ್ಯಾರು ರಿಯಾಯಿತಿ ಪಡೆಯುವುದಕ್ಕೆ ಮುಂದೆ ಬರುತ್ತಾರೆ, ರಿಯಾಯಿತಿ ಪಡೆಯುವುದಕ್ಕೋಸ್ಕರ ಇದು excuse ಆಗಬಾರದು. ನಿಜವಾಗಿಯೂ ಅವರು ಮಾಡುತ್ತಿರುವುದನ್ನು ಸರ್ಕಾರ ಮಾನಿಟರ್ ಮಾಡಬೇಕು. ಅದಕ್ಕೆ ಒಂದು mechanism ಮಾಡುವ ಅಗತ್ಯ ಇದೆ. ನಾವು ಮಾಡುತ್ತೇವೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

"2011ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : 2ನೇ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ ಎಂಬುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.
(2ನೇ ಖಂಡವು ವಿಧೇಯಕದ ಅಂಗವಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿವೆ.)

ಅಧ್ಯಕ್ಷರು : ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬೇಕು.

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"2011ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು."

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು,
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ. ವಿಧೇಯಕಕ್ಕೆ ಅನುಮೋದನೆ

ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ. . .

ಶ್ರೀ ಎಸ್. ಸುರೇಶ್‌ಕುಮಾರ್ : ಎರಡೇ ಇರುವುದು. ನಾನು explain ಮಾಡುತ್ತೇನೆ. ಇದು ಮುಗಿದೇ ಹೋಗಿ ಬಿಡುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, You are capable of explaining. You have got all the capacity. The question is, ನಾವು ಚರ್ಚೆ ಮಾಡುವುದಕ್ಕೆ ನಮಗೆ ಇಲ್ಲಿ ಸಮಯ ಇಲ್ಲ. ಹಾಗಾದರೆ ಇನ್ನೆರಡು ದಿನ ಸದನ ಮುಂದಕ್ಕೆ ಹಾಕಿ. ಬಿಲ್ಲುಗಳನ್ನೆಲ್ಲಾ ಮೊದಲೇ ತೆಗೆದು ಕೊಳ್ಳೋಣ ಆ ಮೇಲೆ ಚರ್ಚೆ ಮಾಡೋಣ. ಸೋಮವಾರ ತೆಗೆದುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ : 10 ನಿಮಿಷದಲ್ಲಿ ಮುಗಿದು ಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : 10 ನಿಮಿಷದಲ್ಲಿ ಮುಗಿಯುತ್ತದೆ. ಇನ್ನೂ ಪ್ರಶ್ನೋತ್ತರವೇ ಮುಗಿದಿಲ್ಲ. ನಿಯಮ 69 ರಲ್ಲಿ ನಾಲ್ಕು ಇವೆ. ಅವುಗಳನ್ನೆಲ್ಲಾ ಚರ್ಚೆ ಮಾಡಬೇಕೋ ಬೇಡವೋ? ಸರ್ಕಾರ ಅದಕ್ಕೆ ಇವತ್ತು ಉತ್ತರ ಕೊಡಬೇಕೋ ಬೇಡವೋ?

ಶ್ರೀ ಸುರೇಶ್ ಕುಮಾರ್ : Agenda ದಲ್ಲಿ ಇರುವುದು ಹಾಗೆ. Allow us 10 ನಿಮಿಷ.

ಶ್ರೀ ಸಿದ್ದರಾಮಯ್ಯ : No. I am not preventing you. ನೀವು allow ಮಾಡುವುದು ಮಾಡಿಯೇ ಮಾಡುತ್ತೀರಿ. ಅವರಿಗೆ ಕೇಳುತ್ತೇವೆ, ಬೇಡ ಸ್ವಲ್ಪ ಸಮಯ ಕೊಡಿ ಆ ಮೇಲೆ ಮಾಡಿ ಸರ್ಕಾರಕ್ಕೆ ಹೇಳಿ ಎಂದು.

4. ಕರ್ನಾಟಕ ಭೂಕಬಳಿಕೆ (ನಿಷೇಧ ವಿಧೇಯಕ 2011
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ,